ಕೊಂಬೆಗಳಂತೆಯೇ ಕಾಣುತ್ತಾರೆ. ನೀಷೆ ಇರಲಿ, ಮೊನ್ನೆ ಮೊನ್ನಿನ ಡೆರಿಡಾನ ನಿರಚನಾವಾದದ ಜೀವದ್ಧ್ವನಿಯಂತೆ ನಮ್ಮ 'ಶೂನ್ಯವಾದ'ದ ಹೊಳಹುಗಳಿವೆ.

ಆದರೆ ಇಂದು ನಮ್ಮವರಲ್ಲಿ ಭೌತಿಕವಾದವು ಹೆಚ್ಚು ಶಕ್ತಿಯುತವಾಗಿ ಕಾಣಿಸಿಕೊಳ್ಳುತ್ತಿದೆ. ಕೆಲವೊಮ್ಮೆ ಪರಂಪರೆಯ ಬೇರುಗಳ ಆಸರೆಯೂ ಇದೆ; 'ಇಹ'ದ ಚಿಂತನಾಕ್ರಮವು ಸುಸ್ಪಷ್ಟಗೊಂಡಿದೆ. ರಸ, ಭಾವ–ಅನುಭಾವಗಳ ಮೂಲದ ಸೌಂದರ್ಯಶಾಸ್ತ್ರೀಯ ತಾತ್ವಿಕತೆಯಿಂದ ದೂರ ಸಾಗಿದ ಇದು ಇಂದಿನ ಆತ್ಯಂತಿಕ ಚಿಂತನಾ ಸ್ಥಿತಿಯಂತೆಯೂ ಇದೆ.

◆ **ಪಾಶ್ಚಾತ್ಯ ಕಲೆಯಲ್ಲಿ ಕಾಣಿಸುವ ಮೂವ್‌ಮೆಂಟ್ ಭಾರತೀಯ ಸಂದರ್ಭದಲ್ಲಿ ಗೋಚರ ಆಗುವುದಿಲ್ಲ. ಏಕೆ?**

ನಮ್ಮ ಸಮುದಾಯಗಳ ಬದುಕಿನ ಬದಲಾವಣೆ ಅತಿ ಸೂಕ್ಷ್ಮವಾಗಿ ಸಾಂಸ್ಕೃತಿಕ ಬದಲಾವಣೆಗಳಲ್ಲಿ ಕಾಣಿಸಿಕೊಳ್ಳುತ್ತವೆ. ಗುರುತಿಸುವ ಮನಸ್ಥಿತಿಯ ಸೂಕ್ಷ್ಮಜ್ಞರ ಕೊರತೆಯೇ ಬೃಹತ್ತಾಗಿ ಕಾಣಿಸುತ್ತದೆ. ನಮ್ಮ ದೃಶ್ಯ ಕಲಾವಿದ/ಕಲಾವಿದೆಯರ ಸಾಂಸ್ಕೃತಿಕ ರಂಗದ, ಇತರ ಕಲಾ ಪ್ರಕಾರದ ವ್ಯಕ್ತಿತ್ವಗಳೊಂದಿಗಿನ 'ಪರಸ್ಪರ'ವು ಇಲ್ಲವೇನೋ ಅನ್ನುವಷ್ಟು ಅಪರೂಪ; ಕಾಫಿಹೌಸ್‌ಗಳ ಕೊರತೆ. ನಮ್ಮವರ ಮನಃಸ್ಥಿತಿಯೂ 'ದ್ವೀಪ' ಸದೃಶ.

ದಲಿತ ಚಳವಳಿಯೊಂದು ಸ್ವಲ್ಪ ಮಟ್ಟಿಗೆ ಅಪವಾದ. ಹೊರಗಿನ ಪಿಕಾಸೋ–ಐನ್‌ಸ್ಟೀನ್, ಪಿಕಾಸೋ–ನೆರುಡಾ, ಪಿಕಾಸೋ– ಬ್ರಾಕ್ವ್, ಪಿಕಾಸೋ–ಗಿಲ್ಲಿ–ಯೋಮ್– ಅಪೊಲ್ಲಿನೇರ್, ಮತ್ತು ರೋಡಿನ್–ಬಾದಿಲೇರ್, ರಿಲ್ಕೆ ಮೊದಲಾದವರ ನಡೆಗಳನ್ನು ಇಲ್ಲಿ ಬಹುತೇಕ ಕಾಣಲಾರೆವು. ಹುಸೇನ್–ಭೀಮಸೇನ್ ಜೋಶಿಯಂತಹವರ ಸಮಾಗಮಗಳು ಎಲ್ಲಿ ಮರುಕಳಿಸಿದವು. ಬಹುತೇಕ ನಮ್ಮವರ ಸೃಷ್ಟಿಗಳು ಸಮಕಾಲೀನ ಸಂವೇದನಾಶೀಲವಾದುವು ಅಷ್ಟೆ. ಆದರೆ ಅವು ಚಳವಳಿಗಳಿಗೆ ಕಾರಣವಾಗುವಷ್ಟು ಪ್ರಭಾವಿ, ಪ್ರಚೋದನಕಾರಿ ಅಲ್ಲ. ಪಶ್ಚಿಮದ ಫ್ಯೂಚರಿಸ್ಟ್ ಕಲಾವಿದರ ದೃಷ್ಟಿಯೇ ಹಳೆಯದೆಲ್ಲವನ್ನೂ ಮ್ಯೂಸಿಯಂ ಇತ್ಯಾದಿಗಳನ್ನೂ ಮಾಡಿ ಎಂಬಂಥದು. ಇರಲಿ. ಎಲ್ಲವೂ ಶಾಶ್ವತವಲ್ಲ. ಆದರೂ ಕಲಾಸೃಷ್ಟಿಯ ಹಿಂದೆ ಮಹತ್ತರ ಕ್ರಾಂತಿಕಾರಿ ಆಕಾಂಕ್ಷೆ, ಪ್ರಖರ, ಅಪೂರ್ವ ರೂಪ, ಕಲ್ಪನಾ ಸಾಮರ್ಥ್ಯ, ಅಭಿವ್ಯಕ್ತಿಯ ವಿಧಾನ–ನಿರ್ವಹಣೆಗಳಿರಬೇಕಲ್ಲವೇ?



ಕಲಾವಿದ ಕೆ.ವಿ. ಸುಬ್ರಹ್ಮಣ್ಯ ಅವರನ್ನು ಸಂದರ್ಶಿಸುತ್ತಿರುವ ದೇವು ಪತ್ತಾರ